[Govt. of Karnataka C.R.P. 67]

| |
|---|
| Deposition Sheets (RP.No.57) Form No.4 |

**IN THE COURT OF PRL. CIVIL JUDGE & J.M.F.C., KARKALA.**

**Criminal Case No. 530/2024**

ಪಿ.ಡಬ್ಲ್ಯು : 2 ಸಿ.ಡಬ್ಲ್ಯು : 2

ಸಾಕ್ಷಿದಾರನ ಹೆಸರು : ಹರೀಶ್ ಪೂಜಾರಿ

ತಂದೆಯ ಹೆಸರು : ವಿಠಲ ಪೂಜಾರಿ

ಪ್ರಾಯ : 42 ವರ್ಷ

ಉದ್ಯೋಗ : ಕೂಲಿ

ವಾಸ : ಅಜೆಕಾರು

ದಿನಾಂಕ 08-07-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆ: ಸಹಾಯಕ ಸರ್ಕಾರಿ ಅಭಿಯೋಜಕರು:-</u>

ಈ ದಿನ ನ್ಯಾಯಾಲಯದ ಮುಂದೆ ಇರುವ ಅರೋಪಿತರನ್ನು ಸಾಕ್ಷಿಯು ಗುರುತಿಸಿರುತ್ತಾರೆ.

ಚಾಸಾ-1, ಚಾಸಾ-3 ರಿಂದ 8 ಪರಿಚಯ ಇದೆ. ನಾವೆಲ್ಲ ಒಟ್ಟಿಗೆ ಕೆಲಸ ಮಾಡುತ್ತಿದ್ದೇವೆ.

ನಾನು 2 ನೇ ಆರೋಪಿ ಶಂಕರ್ ನಾಯಕ್ ರವರೊಂದಿಗೆ ಸುಮಾರು 10 ವರ್ಷದಿಂದ ಕರೆಂಟ್ ಲೈನ್ ಕೆಲಸ ಮಾಡಿಕೊಂಡಿರುತ್ತೇನೆ. ದಿ: 04-07-2023 ರಂದು 2 ನೇ ಆರೋಪಿ ಹೇಳಿದಂತೆ ನಾನು ಹಾಗೂ ಚಾಸಾ-1, ಚಾಸಾ-3 ರಿಂದ 8 ಹಾಗೂ ಮೃತ ಸತೀಶ್ ಶೆಟ್ಟಿ ಕಣಜಾರು ಗ್ರಾಮದ ಪೆಲತ್ತೂರಿಗೆ ಒಂದು ಮನೆಯ ಪಂಪ್ ಸೆಟ್ ಸರಿ ಮಾಡಲು ಹೋಗಿರುತ್ತೇವೆ. ಅಲ್ಲಿ ವಯರಿಂಗ್ ಕೆಲಸ ಮಾಡಿರುತ್ತೇವೆ. ಮಧ್ಯಾಹ್ನ ದವರೆಗೂ ಕೆಲಸ ಮಾಡಿ ಊಟ ಮಾಡಿದ ನಂತರ ಅಂದಾಜು 2.30 ಗಂಟೆಯ ಸಮಯದಲ್ಲಿ ಮೃತ

ಸತೀಶ್ ಶೆಟ್ಟಿಯವರು ವಿದ್ಯುತ್ ಕಂಬಕ್ಕೆ ಕರೆಂಟ್ ಸರಿಮಾಡಲು ಹತ್ತಿದ್ದು ಹತ್ತು ನಿಮಿಷದ ನಂತರ ಅವರಿಗೆ ವಿದ್ಯುತ್ ತಾಗಿರುತ್ತದೆ. ನಂತರ ಅವರು ಕೆಳಗೆ ಬಿದ್ದಿರುತ್ತಾರೆ. ಅವರನ್ನು ಮಣಿಪಾಲದ ಕೆ.ಎಮ್.ಸಿ ಆಸ್ಪತ್ರೆಗೆ 2 ನೇ ಆರೋಪಿ ಹಾಗೂ ಉಳಿದ ಕೆಲಸಗಾರರು ದಾಖಲಿಸಿರುತ್ತಾರೆ. ಆಸ್ಪತ್ರೆಯಲ್ಲಿ ವೈದ್ಯರು ಸತೀಶ್ ಶೆಟ್ಟಿಯವರು ಮೃತಪಟ್ಟ ಬಗ್ಗೆ ತಿಳಿಸಿರುತ್ತಾರೆ. ಈ ಘಟನೆಯ ಕುರಿತು ಪೊಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಮು.ಮಾ-1 ರಿಂದ 7 ನ್ನು ನೋಡಿ ಗುರುತಿಸಿರುತ್ತಾರೆ.

<u>ಪಾಟೀ ಸವಾಲು</u> : 1 ನೇ ಆರೋಪಿ ಪರ : ಶ್ರೀ ಎಸ್.ಕೆ.ಎನ್. ವಕೀಲರಿಂದ ಃ

ನಾನು, ಚಾಸಾ-1, ಚಾಸಾ-3 ರಿಂದ 8 ಹಾಗೂ ಮೃತ ಸತೀಶ್ ಶೆಟ್ಟಿಯವರು ಒಟ್ಟಿಗೆ ಕಳೆದ 15 ವರ್ಷಗಳಿಂದ ವಿದ್ಯುತ್ ಕಂಬ ಮತ್ತು ತಂತಿ ಎಳೆಯುವ ಕೆಲಸ ಮಾಡುತ್ತಿದ್ದೇವೆ. ನಿರ್ದಿಷ್ಟ ಗುತ್ತಿಗೆದಾರರ ಅಡಿಯಲ್ಲಿ ಕೆಲಸ ಮಾಡದೆ ಯಾರು ಕರೆದರೂ ಕೆಲಸಕ್ಕೆ ಹೋಗುತ್ತಿದ್ದೆವು. ಕೆಲಸಕ್ಕೆ ಬೇಕಾದ ಎಲ್ಲಾ ಪರಿಕರಗಳು ನಮ್ಮ ಬಳಿಯಲ್ಲಿ ಇದ್ದವು. ನಾನು 1 ನೇ ಆರೋಪಿಯ ಖಾಯಂ ಕೆಲಸಗಾರನಾಗಿರುವುದಿಲ್ಲ. ಘಟನೆ ನಡೆಯಿತು ಎಂದು ಹೇಳುವ ದಿನ ವಿದ್ಯುತ್ ತಂತಿ ಎಳೆಯುವ ಕೆಲಸ ಮಧ್ಯಾಹ್ನ ಊಟ ಮಾಡುವ ಮೊದಲೇ ಮುಗಿದಿತ್ತು. ಊಟ ಮಾಡಿದ ನಂತರ ಮನೆಯವರು ಕರೆಂಟ್ ಡಿಮ್ ಇದೆ ಎಂದು ಹೇಳಿದ್ದು ಅದನ್ನು ಪರಿಶೀಲಿಸುವಂತೆ 2 ನೇ ಆರೋಪಿ ಸತೀಶ್ ಶೆಟ್ಟಿಯವರಿಗೆ ಹೇಳಿದ್ದು ಆ ನಂತರ ಸತೀಶ್ ಶೆಟ್ಟಿ ವಿದ್ಯುತ್ ಕಂಬ ಹತ್ತಿರುತ್ತಾರೆ. ಮೃತ ಸತೀಶ್ ಶೆಟ್ಟಿಯವರ ಅಜಾಗರೂಕತೆಯಿಂದ ಘಟನೆ ನಡೆದಿದೆ ಎಂದರೆ ಸರಿಯಲ್ಲ. ಈ ಘಟನೆಗೂ 1 ನೇ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿ.

<u>ಪಾಟೀ ಸವಾಲು</u> :2 ನೇ ಆರೋಪಿ ಪರ : ಶ್ರೀ ಪಿ.ಎ.ಎಸ್. ವಕೀಲರಿಂದ ಃ

ನಾವುಗಳು 2 ನೇ ಆರೋಪಿಯ ಖಾಯಂ ಕೆಲಸಗಾರರಲ್ಲ ಎಂದರೆ ಸರಿ. ತನ್ಯಾ ನಾಯಕ್ ರವರ ಮನೆಯ ಪಂಪಿಗೆ ವಿದ್ಯುತ್ ಎಳೆಯುವ ಗುತ್ತಿಗೆದಾರರು 2 ನೇ

ಅರೋಪಿ ಅಲ್ಲ ಎಂದರೆ ನನಗೆ ಗೊತ್ತಿಲ್ಲ. ಆದರೆ ಅವರೇ ನಮ್ಮನ್ನು ಕರೆದಿರುತ್ತಾರೆ. ಯಾರು ಗುತ್ತಿಗೆದಾರರು ಎಂದು ನಮಗೆ ತಿಳಿಸಿರುವುದಿಲ್ಲ. ನಾವು ಕೇಳಿರುವುದಿಲ್ಲ. ಮಧ್ಯಾಹ್ನದ ಹೊತ್ತಿಗೆ ಎಲ್ಲಾ ಕೆಲಸ ಮುಗಿಸಿ ಊಟಕ್ಕೆ ಹೋಗಿದ್ದವು. ನಾವು ಕೆಲಸ ಮುಗಿಸಿದ ನಂತರ ಕರೆಂಟ್ ಲೈನ್ ನ್ನು ಚಾರ್ಜ್ ಮಾಡಲಾಗಿತ್ತು. ಕರೆಂಟ್ ಲೈನ್ ಚಾರ್ಜ್ ಆದ ನಂತರ ಅದನ್ನು ಆಫ್ ಮಾಡಬೇಕಾದರೆ ಇಲಾಖೆಗೆ ಮಾಹಿತಿ ನೀಡಿ ಅಲ್ಲಿನ ಸೆಕ್ಷನ್ ಆಫೀಸರ್ ಆದೇಶ ಪಡೆಯಬೇಕು. ಕಾನೂನು ಪ್ರಕಾರ ಲೈನ್ ಮ್ಯಾನ್ ಮಾತ್ರ ವಿದ್ಯುತ್ ಕಂಬ ಹತ್ತಬೇಕು ಎಂದರೆ ಸರಿ. ಕರೆಂಟ್ ಡಿಮ್ ಆಗಿದೆ ಎಂದು ಹೇಳಿದ ನಂತರ 2 ನೇ ಆರೋಪಿ ಸತೀಶ್ ಶೆಟ್ಟಿಯವರಿಗೆ ವಿದ್ಯುತ್ ಕಂಬ ಹತ್ತಿ ಸರಿ ಮಾಡಲು ತಿಳಿಸಿರುತ್ತಾರೆ. ಆ ಸಮಯದಲ್ಲಿ ಲೈನ್ ಮ್ಯಾನ್ ಕರೆಂಟ್ ಆಫ್ ಆಗಿದೆ ಎಂದು 2 ನೇ ಆರೋಪಿಗೆ ಹೇಳಿದ್ದು ಅವರು ನಮಗೆ ಹೇಳಿರುತ್ತಾರೆ. 2 ನೇ ಅರೋಪಿ ನಮ್ಮನ್ನು ಕೆಲಸಕ್ಕೆ ಕರೆದಿರುವುದಿಲ್ಲ, ನಾವು ಅವರ ಕೆಲಸಗಾರರಲ್ಲ ಎಂದರೆ ಸರಿಯಲ್ಲ. 2 ನೇ ಆರೋಪಿ ಸತೀಶ್ ಶೆಟ್ಟಿ ಗೆ ಕಂಬ ಹತ್ತಲು ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ಲೈನ್ ಮ್ಯಾನ್ ಇದ್ದರು ಸಹ ಸತೀಶ್ ಶೆಟ್ಟಿ ಅನಧೀಕೃತವಾಗಿ ಕಂಬ ಹತ್ತಿರುತ್ತಾರೆ ಎಂದರೆ ಸಾಕ್ಷಿಯು ಶಂಕರ್ ನಾಯಕ್ ರವರು ಹೇಳಿದ ಮೇರೆಗೆ ಹತ್ತಿರುತ್ತಾರೆ. ಸತೀಶ್ ಶೆಟ್ಟಿಯವರ ಅಜಾಗರೂಕತೆಯಿಂದ ಘಟನೆ ಸಂಭವಿಸಿರುತ್ತದೆ ಎಂದರೆ ಸರಿಯಲ್ಲ. ಶಂಕರ್ ನಾಯಕ್ ಗೂ ಘಟನೆಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಗುತ್ತಿಗೆ ಪಡೆದವರೇ ಪರಿಕರಗಳನ್ನು ಪೂರೈಸಬೇಕು ಎಂದರೆ ಸರಿ.

<u>ಪಾಟೀ ಸವಾಲು</u> ಃ3 ನೇ ಆರೋಪಿ ಪರ ಃ ಶ್ರೀ ಕೆ.ವಿ.ಕೆ. ವಕೀಲರಿಂದ ಃ

ನಮ್ಮ ಮನೆ ಅಜೆಕಾರಿನಲ್ಲಿದ್ದು, ತಕ್ಷೀರು ಸ್ಥಳದಿಂದ 40 ಕಿ.ಮೀ ದೂರದಲ್ಲಿದೆ. ವಿದ್ಯುತ್ ಕಂಬ ನಿಲ್ಲಿಸುವುದು, ಹೊಂಡ ತೆಗೆಯುವುದು ನಮ್ಮ ಕೆಲಸವಾಗಿರುತ್ತದೆ. ನಾನು ಕೆಲಸಕ್ಕೆ ಸಂಬಂಧಿಸಿದಂತೆ ತರಬೇತಿ ಪಡೆದಿರುವುದಿಲ್ಲ. ನಾನು ವಿದ್ಯುತ್ ಕಂಬ ಹತ್ತಿ ಕೆಲಸ ಮಾಡಿರುತ್ತೇನೆ. ಕಂಬದ ಮೇಲೆ ಹತ್ತಿ ಕೆಲಸ ಮಾಡಲು ದಾಖಲೆ ಬೇಕು ಎಂದರೆ ಗೊತ್ತಿಲ್ಲ. ಪೊಲೀಸರು ನನ್ನನ್ನು ಘಟನೆ ನಡೆದ ಮರುದಿನ ಸ್ಥಳಕ್ಕೆ ಬಂದು

ವಿಚಾರಣೆ ಮಾಡಿರುತ್ತಾರೆ. ನಂತರ ಪೋಲೀಸ್ ಠಾಣೆಗೆ ಒಂದು ಬಾರಿ ಕರೆದು ವಿಚಾರಿಸಿರುತ್ತಾರೆ. ನಾವು ಮಧ್ಯಾಹ್ನ ಊಟ ಮಾಡಿದ ಮನೆಯವರ ಹೆಸರು ಗೊತ್ತಿಲ್ಲ. ಸತೀಶ್ ಶೆಟ್ಟಿಯವರಿಗೆ ತಂಬಾಕು ಮತ್ತು ಜರ್ದ ಸೇವಿಸುವ ಹವ್ಯಾಸ ಇತ್ತು ಎಂದರೆ ಸರಿ. ನಾವು ಕೆಲಸ ಮಾಡಿದ್ದೇವೆ ಎಂಬ ಜಾಗದಲ್ಲಿ 5 ಕಂಬಗಳು ಇದ್ದವು. ನಿಖರವಾಗಿ ಎಷ್ಟನೇ ಕಂಬದಿಂದ ಸತೀಶ್ ಪೂಜಾರಿಯವರು ಬಿದ್ದಿರುತ್ತಾರೆ ಎಂದು ಗೊತ್ತಿಲ್ಲ. ನಾನು ತಕ್ಷೀರು ದಿನ ಕೆಲಸಕ್ಕೆ ಹೋದ ಬಗ್ಗೆ ಪೊಲೀಸರು ದಾಖಲೆ ಪಡೆದುಕೊಂಡಿಲ್ಲ ಎಂದರೆ ಸರಿ. ನಾನು ಘಟನೆ ನಡೆಯುವ ಸಮಯದಲ್ಲಿ ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ತಕ್ಷೀರಿಗೂ 3ನೇ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಮುಖ್ಯ ವಿಚಾರಣೆಯಲ್ಲಿ ಹೇಳಿದ ಸಾಕ್ಷ್ಯಕ್ಕೂ ಆರೋಪಿತರಿಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಃ ಇಲ್ಲ

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಕಾರ್ಕಳ